# ಬೇಂದ್ರೆ–ಕುವೆಂಪು ಕಾವ್ಯದಲ್ಲಿ ವೈಚಾರಿಕತೆ

***ರಮೇಶ್ ಸಿ, ಪಿ ಎಚ್ ಡಿ ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.**

**ಪ್ರವೇಶ**

ಹುಟ್ಟು ಸಾವಿನ ದ್ವಂದ್ವಗಳನ್ನು ಒಳಗೊಳ್ಳುವ ಸೃಷ್ಟಿಕ್ರಿಯೆಯ ಬೆಗೆಗಿನ ಅತ್ಯಂತ ಸಫಲ ಕವನಗಳಲ್ಲಿ 'ಮೀನಕೇತು' ಮುಖ್ಯವಾಗಿದೆ. ಈ ಕವನದಲ್ಲಿ ಬರುವಕಾಮ, ಕರ್ಣ, ಮತ್ತು ಬಾಲಕೇಷ್ಣನ ಬಗೆಗಿನ ಮಿಥ್ ಗಳ ಮತ್ತು ಫಲವಂತಿಕೆಯ ಸಂಕೇತಗಳು ಕಾವ್ಯಸೃಷ್ಟಿಯ ಬಗೆಗಿನ ಸಂಕೀರ್ಣವಾದ ಅನುಭವವನ್ನು ಕೊಡುತ್ತವೆ.

'ಪೆಳಯದ ಎದಿಮ್ಯಾಲೆ

ಆಲದ ಎಲೆಯೊ'

ಪು.ಸಂ 117

ಇಲಿ 'ಹಡಿದವರ ತಿನ್ನುವ ಮೂರ್ತಿ ಕವಿಯ ವ್ಯಕ್ತಿತ್ವವನ್ನು 'ಅಹಂ' ಅನ್ನು ನಾಶ ಮಾಡುವ ಕವನವೇ ಆಗಿದೆ. ಕಾವ್ಯದ ಹುಟ್ಟಿಗೆ ಕವಿ ನಿಮಿತ್ತ ಮಾತ್ರವಾಗಿದ್ದರಿಂದ ಮತ್ತು ಕವನ ಸ್ವಯಂಭೂತ ಆಗಿದ್ದರಿಂದ.

ಕುಂತಿಯ ಕಿವಿಗೆ ಕಿನ್ನೀಕಿ ಕುವರಾ ಆಗಿರುವ ಕರ್ಣಕಾವ್ಯಕ್ಕೆ ಇನ್ನೊಂದು ಸಮರ್ಥ ಸಂಕೇತವಾಗುತ್ತಾನೆ/ ಕವಿಯ ವ್ಯಕ್ತಿತ್ವ ಲಯವಾದರೂ ಅವನ 'ಜೀವಾ' ಕಾವ್ಯ ಸೃಷ್ಟಿಯು ಫಲವಂತಿಕೆಯಲ್ಲಿ ಸಾಫಲ್ಯ ಪಡೆಯುತ್ತದೆ. ಅದೊಂದು ಕಾಣಿಕೆಯ ಕುರುಹು ಸೂರ್ಯನ ಸ್ಪರ್ಶದಿಂದ ಕುಂತಿ ಕರ್ಣನನ್ನು ಹಡೆದು ತೇಲಿ ಬಿಟ್ಟಂತೆ ಎಂಬಲ್ಲಿ ಕವಿಯ ಪ್ರತಿಭೆಯು ಸರ್ಶ ಜನಸಾಗರದಲ್ಲಿ ತೇಲಿ ಬರುತ್ತದೆ.

ಮುಂಗಾರು ಹನಿಗೆ

ಅರಳಿತ್ತು ಮಣ್ಣು

ಹೊಡೆದಾಯಿತ್ತು ನೇಗಿಲಾ

ಈ ನಿಗೂಡವಾದ ಸೃಷ್ಟಿಕ್ರಿಯೆ ಕವಿಯ ಸುಪ್ತ ಪ್ರಜ್ಞೆಯ ಆಳದಲ್ಲೇ ನಡೆಯುತ್ತದೆ. ಅನುಭವವಾದರೂ ಅರ್ಥವಾಗದ ಸಂದಿಗ್ಧ ಮಾತ್ರ ನೆನಪಿನಲ್ಲಿ ಉಳಿಯುತ್ತದೆ. ಕಾವ್ಯಸೃಷ್ಟಿಯಲ್ಲಿ ವ್ಯಕ್ತಿತ್ವ ಲಯವಾದರೂ ಜೊತೆಗೆ ಅವನ ಜಾಗೃತಿ ಪ್ರಜ್ಞೆಯ ಉದ್ದೇಸಗಾರಿಕೆ ಕೂಡಾ ಲಯವಾಗುತ್ತದೆ.

ಬೇಂದ್ರೆಯವರ ಕವನಗಳು ಮಾನವೀಯತೆಯ ಸೊಗಡನ್ನು ಕೊಡುವುದಕ್ಕೆ ಕಾರಣವಾಗುತ್ತದೆ. ಮನುಷ್ಯನ ಸಂದರ್ಭದ ಪರಿಸರವನ್ನು ಮನಃಸ್ಥಿಯನ್ನು ಉತ್ಕಟವಾದ ಒಂದು ಕ್ಷಣದ ಭಾವ ಸ್ಥಿಯನ್ನು ಹೊತ್ತು ತರುತ್ತವೆ. ಇಬವರು ಸಾಧಿಸಿಸ ಸೂಕ್ಷಮತೆ ಮತ್ತು ಸಂಕೀರ್ಣತೆಗಳು ಅವರ ಸ್ವಂತದ ಕೊಡುಗೆಗಳಾಗಿವೆ. ಅವುಗಳ ಮೂಲಕ ಜನಾಂಗದ ಭಾವಸ್ಪಂದನೆಯನ್ನು ಅಗಾಧವಾಗಿ ಕಾಣಬಹುದಾಗಿದೆ.

ಕುವೆಂಪು ಕಾವ್ಯದ ಎಲ್ಲಾ ಕವನಗಳಲ್ಲೂ ವೈಚಾರಿಕಚಾಗದ ವಸ್ತೂಗಳೇ ಇಲ್ಲ ಎನ್ನಬಹುದು ಇವರಿಂದ ಕಾವ್ಯಲೋಕದಲ್ಲಿ ತಮ್ಮ ವಿಶಿಷ್ಟ ಕೃತಿಯಿಂದ ಕುವೆಂಪು ಯುಗವನ್ನೇ ಸೃಷ್ಟಿಸಿದರು ಮುಖ್ಯವಾಗಿ ಅವರ ವೈಚಾರಿಕ ನಿಲುವು ವೈಜ್ಞಾನಿಕ ದೃಷ್ಟಿಯಿಂದ ಪ್ರೇರಿಪಿತವಾದದ್ದು ಪೋಷತಿವಾದದ್ದು ಕವಿಯಾಗಿ ಅವರ ಭಾವಕತೆಯಲ್ಲಿ ಕರಗಿ ಹೋಗುವರಲ್ಲ ತಮ್ಮ ಕಲಾಸುಂದರಿಯ ಮುನ್ನವಿಯಲ್ಲಿ ನಿಜವಾದ ಕಾವ್ಯದ ಸ್ವರೂಪವೇನೆಂಬುದನ್ನು ಗಂಭಿರವಾಗಿ ವಿವೇಚಿಸಿದ್ದಾರೆ ಜಗದಂತಹ ಯಾತ್ರೆಯಲ್ಲಿ ಅಕ್ಷೆಯರಸ ಪಾತ್ರಯಲ್ಲಿ .

ಓ ಮೃತ್ಯು ಮಾಧುರಿ

ತುಂಬಿ ಹರ್ಷ ಶೋಕಮಂ ಸೃಜಪ ನರಕ ನಾಕಮಂ.

..........................................ಹೇ ಬೆರೆಓತನೇಂದಿರೆ

{ಕಲಾ ಸುಂದರಿ ಪು.ಸಂ 189}

ಕಲಾಸುಂದರಿ ಸರಸಿಯಾದರೂ ಮಾಹಾತಪಸ್ವಿನಿ ಎಂದೇ ಪ್ರಾರಂಭವಾಗುವ ಆ ಪ್ರತಿಪಾದನೆಯಲ್ಲಿ ಆಳವಾದ ಚಿಂತನಾಶೀಲತೆಯಿಂದ ಮೂಢಿಬಂದ ವಿಚಾರಸೂತ್ರಗಳು ಹರಳಗಟ್ಟಿ ಹೊಳೆಯುತ್ತವೆ. ಕಾವ್ಯದ ಆನಂದ ಬೂರಗದ ಅರಳಿಯಂತೆ ಹಗುರವಾದ ಧ್ಯಾನಮಯವೂ ತತ್ವಶೀಲವೂ ಆದ ವಜ್ರದ ಹೊಳಪನ್ನು ಪಡೆಯಬೇಕೆಂಬುದನ್ನು ಅವು ಎತ್ತಿ ಹಿಡಿಯುತ್ತವೆ.

ವಿಜ್ಞಾನ, ತತ್ವಶಾಸ್ತ್ರ, ಇವುಗಳ ಭದ್ರವಾದ ತಳಹದಿಯ ಮೇಲೆ ಮಾಡಿದ ದರ್ಶನ ಕಾವ್ಯದ ಕಣ್ಣು ಎಎಂಬುದನ್ನು ಅಲಲಿ ಅತ್ಯಂತ ವೈಚಾರಿಕವಾಗಿ ವಿವೇಚಿಸಿದ್ದಾರೆ. ಅವರ ಪ್ರಕೃತಿಗೀತೆಗಳಾಗಲಿ ಆಧ್ಯಾತ್ಮಿಕ ಗೀತೆಗಳಾಗಲಿ ಸಾಮಾಜಿಕ ಪ್ರಜ್ಞೆಯ ಕ್ರಾಂತಿಕಾರಕ ಗೀತೆಗಳಾಗಲಿ ಕೊನೆಗೆ ಪ್ರಣಯಗೀತೆಗಳಾಗಲೀ ಎಲ್ಲಲ್ಲೇಯೂ ಅವರ ಈ ದಾರ್ಶನಿಕ ಮಾಹಾಕಾವ್ಯವಂತೂ ಪರಿಪೂರ್ಣ ಜೀವನ ದರ್ಶನವನ್ನು ಅದರ ಎಲ್ಲ ಸ್ತರಗಳಲ್ಲೂ ಜೀವಂತವಾಗಿ ಹಿಡಿದಿಟ್ಟಿವೆ. ವೈಚಾರಿಕತೆ ಕುವೆಂಪು ಅವರ ಹೃದಯಕ್ಕೆ ತೀರ ಹತ್ತಿರವಾಗಿದ್ದ ಪವಿತ್ರ ಗಂಭೀರ ವಿಷಯ ಬಾಲ್ಯದಲ್ಲಿಯೇ ಅತ್ಯಂತ ತಿಳವಳಿಕೆ ಬರುತ್ತಿದ್ದಂತೆಯೇ ಮೌಢ್ಯ ವಿರೋಧಿಯಾಗುತ್ತಾರೆ. ಎಲ್ಲಾ ಗೊಡ್ಡ ಸಂಪ್ರದಾಯಗಳನ್ನು ಸಾರಾಸಾಗಟವಾಗಿ ತಿರಸ್ಕರಿಸುತ್ತಾರೆ. ಹೊದಡೆಯಲಲ್ಲಾ ಮೌಢ್ಯ ವಿರೋಧಿ ಪ್ರಸಾರ ಕೈಗೊಳ್ಳುತ್ತಾರೆ. ಮತಿ ಮಾನವನ ಸರ್ವೂತ್ಕೃಷ್ಟ ಆಯುಧವೆಂದು ಆತ್ಮಶ್ರೀಗಾಗಿ ನರಂಕುಶಮತಿಗಳಾಗಿರಂದಂ ಸಾರುತ್ತಾರೆ ವಿಚಾರವಿಲ್ಲದ ವೇಷ್ಠ ದೃಷ್ಟಿಯಿಂದಲೂ ಹಾನಿಕಾರಕವಾದುದೆಂದು ಪರೀಕ್ಷೆ, ವಿಮರ್ಶೆ, ವಿಚಾರ ಇವೆಲ್ಲಾ ಸದಾ ವೈಚಾರಿಕತೆಯಲ್ಲಿ ತೊಡಗಿ ಸನ್ಮತಿಯನ್ನು ಸಾರುತ್ತಾ ಸಾಗಬೇಕು ಎನ್ನುತ್ತಾರೆ.

ಸಾಂಪ್ರದಾಯಿಕ ಚೌಕಟ್ಟುಗಳನ್ನು ಸ್ವಂತಿಕೆಗೆ ಅನುವು ಮಾಡಿಕೊಡುವ ಪ್ರಕ್ರಿಯವನ್ನು ಬೇಂದ್ರೆ ಕೆಲವು ಪರಿಕಲ್ಪನೆಗಳನ್ನು ದುಡಿಸಿಕೊಳ್ಳುವುದರಲ್ಲಿ ಗುರುತಿಸಬಹುದು ಬದುಕು ಭಗವಂತನಲೀಲೆಯನ್ನುವುದು ಜನಾಂಗದ ಒಂದು ಮುಖ್ಯ ಮಿಥಾಗಿದೆ. ಸಾಂಪ್ರದಾಯಕ ತತ್ವಜ್ಞಾನದಲ್ಲಿ ರೀತಿಯ ಪರಿಕಲ್ಪನೇಯಲ್ಲಿ ಬದುಕಿನ ಸತ್ಯವನ್ನು ಪ್ರಸ್ತುತತೆಯನ್ನು ಅಲ್ಲಗಳೆಯುವ ಸಿದ್ದಾಂತ ಆಗಿದೆ. ಲೌಕಿಕದಲ್ಲಿ ಕಾಣುವ ಲಿಲೇ ಗೌಣವಾಗಿದ್ದು ಈ ಲಿಲೇಯ ಹಿಂದಿರುವ ಅಲೌಕಿಕ ಶಕ್ತಿ ಮುಖ್ಯವಾಗಿಬಿಡುತ್ತದೆ . ಬೇಂದ್ರೆಯವರಿಗೆ ಈ ಜಗತ್ತಿನಲ್ಲಿ ಯಾವುದು ಜಿಟಿ ಆಗಿ ಕಾಣುವಿದಿಲ್ಲ ಅಲ್ಲದೇ ಪ್ರತಿಯೊಂದು ವಸ್ತುವಿನ ವಿಶಿಷ್ಟತೆ ಬದಿಕಿನ ಅರ್ಥವಂತಿಕೆಯ ಅಂಗವಾಗಿದೆ.

"ನೂರು ಮರ ನೂರು ಸ್ವರ

ಒಂದೊಂದು ಅತಿ ಮದುರ".................

ಪು.ಸಂ.219

ಜಗತ್ತಿನ ಬಹುಮುಖತ್ವ ಅದರ ಹಿಂದಿರುವ ಏಕತ್ವದ ಅಭಿವ್ಯಕ್ತಿಯನ್ನುವುದು ಸಾಂಪ್ರದಾಯಿಕ ತಾತ್ವಿಕತೆ ಇದನ್ನು ಒಪ್ಪಿಕೊಳ್ಳುವ ಬೇಂದ್ರೆಯರವರು ಒತ್ತುಕೊಡುವುದು ಬಹುಮುಖತ್ವದ ಮೇಲೆ ಏಕತ್ವದ ಅರಿವಿನ ಪ್ರಯೋಜನವೆಂದರೆ ಬಹುಮುಖತ್ವವನ್ನು ನುರುಮ್ಮಳವಾಗಿ ಸ್ವೀಕರಿಸುವುದು ಸಾಧ್ಯವಾಗುತ್ತದೆ. ಬೇಂದ್ರೆಯವರ ಕಾವ್ಯದಲ್ಲಿ ತಾತ್ವಿಕತೆಯ ವಿಚಾರವನ್ನು ಆಲೋಚಿಸುವಾಗ ಶಿಷ್ಟಕಾವ್ಯದಲ್ಲಿ ವೈಚಾರಿಕತೆ ಅಭಿವ್ಯಕ್ತವಾಗು ವಿಶಿಷ್ಟವಾದ ರೀತಿ ನಮ್ಮ ಮನಸ್ಸಿನಲ್ಲಿರಬೇಕು.

ಅಮೂರ್ತವಾದ ತಾತ್ವಿಕತೆ ಜಾನಪದ ಕಾವ್ಯದ ಸ್ವಭಾವಕ್ಕೆ ಹೊರತಾಗಿದೆ. ನುಡಿಗಟ್ಟು ಆಚರಣೆ ಮತ್ತು ಮಿಥ್‌ಗಳ ಮೂಲಕ ವ್ಯಕ್ತವಾಗುವ ವೈಚಾರಿಕತೆ ಜಾನಪದ ಕಾವ್ಯದಲ್ಲಿ ಅನುಭವದ ಮೂರ್ತತೆಯ ಒಂದು ಅಂಶವಾಗಿರುತ್ತದೆ. ಪ್ರತಿಮೆ ಮತ್ತು ರೂಪಕಗಳ ಮೂಲಕ ಅಭಿವ್ಯಕ್ತವಾಗುವ ಈ ವೈಚಾರಿಕತೆ ಜನಾಂಗದ ಪ್ರಜ್ಞೆಯಲ್ಲಿ ಅದ್ದಿ ಹೊಗಿರುವ ಅಂಶಗಳನ್ನು ಮಾತ್ರ ಒಳಗೊಳ್ಳುತ್ತದೆ. ಜಾನಪದ ಕಾವ್ಯ ವೈಚಾರಿಕತೆಯ ಸೂಕ್ಷ್ಮತೆಗಳನ್ನು ಒಳಗೊಳ್ಳಬಾರದು ಎನ್ನುವುದು ಒಂದು ಪೂರ್ವಾಗ್ರಹ ಮಾತ್ರವಾಗಿದೆ. ಜಾನಪದ ಕಾವ್ಯದಲ್ಲಿಯ ವೈಚಾರಿಕ ರಚನೆಗಳು ಶಿಷ್ಟ ಕಾವ್ಯಕ್ಕಿಂತ ತೀರ ಬೇರೆಯಾಗಿರುವುದರಿಂದ ಇಂಥ ಭಾವನೆ ನಮ್ಮಲ್ಲಿ ನೆಲೆಯೂರಿದೆಯೆಂದು ಕಾಣುತ್ತದೆ.

ಕುವೆಂಪು ಅವರು ಪರೋಹಿತಸಾಹಿಯ ಕೇಂದ್ರಗಳಾದ ಗುಡಿ–ಚರ್ಚು–ಮಸಿದಿಗಳನ್ನು ನಿರಾಕರಿಸುವ ನ ಧ್ವನಿವಯೊಂದು ತುಂಬ ಪ್ರಧಾನವಾಗಿ ಕೇಳಿಬರುವ ಅಂಶವಾಗಿದೆ. ಆಧುನಿಕ ನವೋದಯ ಕನ್ನಡದ ಪ್ರಮುಖಕವಿಗಳ ನಡುವೆ ಕುವೆಂಪು ಬೇರೆಯಾಗಿ ನಿಲ್ಲುವುದು ಈ ಕಾರಣದಿಂದಲೇ 'ಗುಡಿಗಳಿವು ಪಾಪಿಗಳ ಭೋಗಿಗಳ ಗೂಡುಗಳು' ಶಿವಗುಡಿಯ ಶಿವನು ಜೋಯಿಸರ ಶಿವನಂತೆ' ಎಂದು ಹೇಳುತ್ತಾ ದೇವಸ್ಥಾನದ ಸಮೀಪಕ್ಕೆ ಹೋಗುವುದನ್ನು ನಿರಾಕರಿಸುತ್ತಾ ತಾನು ಮಾಡುವ ದೈನಂದಿನ ಕರ್ಮಗಳಲ್ಲ ತಾನು ಶಿವನನ್ನು ಕಾಣುತ್ತೇನೆ ಎನ್ನುವ ಛಲಗಾರನ ದಿಟ್ಟತನದ ಇಂದು ತುಂಬಾ ಕ್ರಾಂತಿಕಾರಕವಾದದ್ದು ಎಂದು ಬೇರೆ ಹೇಳಬೇಕಾಗಿಲ್ಲ ಇಂದು ಎಲ್ಲೆಂದರಲ್ಲಿ ಕಾಲೇಜು ಕಾರ್ಖಾನೆ ಸರ್ಕಾರಿ ಕಛೇರಿಗಳ ಆವರಣದಲ್ಲಿ ಗುಡಿಗಳನ್ನು ನಿರ್ಮಿಸುತ್ತಿರುವುದನ್ನು ನೋಡಿದರೆ ಪುರೋಹಿತ ಸಂಸ್ಕೃತಿಯು ಇನ್ನೂ ಜೀವಂತವಾಗಿರುವುದು ಗಮನಕ್ಕೆ ಬರುವುದಲ್ಲದೆ, ಬುದ್ಧ, ಬಸವ, ಅಂಬೇಡ್ಕರ್ ಕುವೆಂಪು ಸಾರಿದ ನಿರಂಕುಶಮತಿತ್ವ ನಿಂತುಹೋಗಿದೆ. ಜನರು ಮೌಢ್ಯ ಸಂಪ್ರದಾಯಗಳಿಗೆ ದಾಸರಾಗಿದ್ದಾರೆಂಬುದು ಮನದಟ್ಟಾಗುತ್ತದೆ.

" ಬೆಂಕಿಯನಾರಿಸಿ ಬೂದಿಯ ಮಾಡಿ

ಆ ಬೂದಿಯ ಮಯಮಯ ಕೊಂಡಾಡಿ "

ಸಂಪುಟ 1 ಪು, 416

ಮೇಲಿನ ಕವಿತೆಯೊಳಗೆ ಕುವೆಂಪು ಮಾನವ ಮಿತಿಗೆ ಮತ್ತು ಕವಿಯುವ ಕತ್ತಲೆಯೊಳಗೆ ಅವಿತಿರುವನು ಹತ್ತಸಿರುವವನ್ನು ಅಗ್ರೋದಕರಿಂದ ನಿಂದಿಸುತ್ತಾ ಮಿಂಚುವ ಪೂಜಾರಿಯ ಅಥವಾ ಪುರೋಹಿಯ ಶಾಹಿಯ ಕುತಂತ್ರವನ್ನು ಚಿತ್ರಿಸುವ ಕ್ರಮ ಒಂದು ಸರ್ವಕಾಲಿಕ ಸತ್ಯದ ಪ್ರತಿಮೆಯಾಗಿದೆ.

ಗುಡಿಯೊಳಗೆ ಕಣ್ ಮುಚ್ಚಿ ಬೆಚ್ಚಗಿರುತಿಹನಲ್ಲ ಭಕ್ತರ ರಕ್ತವ ಹೀರಿ ಕೊಬ್ಬಿಹರನಲ್ಲ ಗಂಟೆಜಾಗಟೆಗಳು ಬಡಿದು ಕುತ್ತಿಗೆ ಹಿಡಿದು ಕಡಲೆಡಗೆ ನೂಕಿರೈ ಎಂದು ಕರೆ ಕೊಡುವ ಕುವೆಂಪು ಅವರ ಎಷ್ಟೋ ಕವಿತೆಗಳು ಅವರ ಕ್ರಾಂತಿಕಾರೀ ವೈಚಾರಿಕತೆಯ ಪ್ರತಿನಿಧಿಗಳಂತಿವೆ ಅದರಲ್ಲಿಯೂ ಈಗ ಉಲ್ಲೇಖಿಸಿದ ಎರಡು ಕವಿತೆಗಳನ್ನು ಕುವೆಂಪು ಬರೆದಿದ್ದು "ನೂರು ಹೊರಬನ್ನಿ ಆರೇಳು ದಶಕಗಳ ಹಿಂದೆ".

ಆದರೆ ಇತ್ತೀಚಿನ ಕೆಲವು ದಶಕಗಳಿಂದ ದೇವರು– ಧರ್ಮ ದೇವಸ್ಥಾನಗಳ ಹೆಸರಿನಲ್ಲಿ ಧರ್ಮ ಮತ್ತು ರಾಜಕಾರಣಿಗಳ ಮೈತ್ರಿಯಿಂದ ನಮ್ಮ ರಾಷ್ಟ್ರದ ಬದುಕು ಕಲುಷಿತವಾಗುತ್ತಿರುವ ಅಸ್ವಸ್ಥ ಸಾಮಾಜಿಕ ಹಿನ್ನೆಲೇಯಲ್ಲಿ ನೋಡಿದರೆ ಕುವೆಂಪು ಅವರ ಈ ಕವಿತೆಗಳ ನಡುವೆ 'ಸೋಮನಥಪುರ ದೇವಾಲಯ'ವನ್ನು ಕುರಿತು 1928ರಷ್ಟು ಹಿಂದೆಯೆ ಅವರು ಬರೆದ ಬಾಗಿಲೊಳು ಕೈ ಮುಗಿದು ಬಾ ಯಾತ್ರಿಕನೆ , ಶಿಲೆಯಲ್ಲಿನ ಗುಡಿಯು ಕಲೆಯ ನಲೆಯು' ಎಂದು ಪ್ರಾರಂಭವಾಗುವ ಕವಿತೆ ಮೇಲುನೋಟಕ್ಕೆ ಕುವೆಂಪು ದೇವಾಲಯ ಪ್ರವೇಶಕ್ಕೆ ಕೊಡಲು ಕರೆದಂತೆ ಮತ್ತು ದೇವಸ್ಥಾನಗಳ ಪರವಾಗಿರುವೋತೆ ಭಾಸವಾದರೂ ಮೂಲತಃ ದೇವಸ್ಥಾನಗಳನ್ನು ಕುರಿತು ಕುವೆಂಪುಅವರ ವೈಚಾರಿಕತೆ ವಿರೋಧವೇನು ಇಲ್ಲ.

ಯಾಕೆಂದರೆ ಕುವೆಂಪು ದೇವಸ್ಥಾನ ವಿರೋಧಿಯೇನಲ್ಲ ಅವರ ವಿರೋಧವೇನಿದ್ದರು ದೇವಸ್ಥಾನಗಳನ್ನು ಸುಲಿಗೆಯ ಹಾಗೂ ಅರ್ಥಹಿನ ಸಂಪ್ರದಾಯಗಳ ಕೇಂದ್ರವಾಗಿ ಮಾಡಿಕೊಂಡ ಪುರೋಹಿತಶಾಹಿಯೆ ಪ್ರವೃತ್ತಿಗಳನ್ನು ಕುರಿತು ಗಂಟೆಗಳ ದನಿಯಲ್ಲಿ ಜಾಗಟೆಗಳಿಲ್ಲ ಕರ್ಪೂರದಾರತಿಯ ಜ್ಯೋತಿಯಿಲ್ಲ ಎನ್ನುವ ಕಾರಣಕ್ಕೆ ತನ್ನ ಶಿಲ್ಪಕಲಾವೈಭವದಿಂದ 'ಭಗವಂತನಾನಂದ ಮೂರ್ತಿಗೊಂಡಿರುವ ಈ ದೇವಸ್ಥಾನಕ್ಕೆ ಕುವೆಂಪು ಯಾತ್ರಿಕರನ್ನು ಕರೆಯುತ್ತಾರೆ'.

ಬೇಂದ್ರೆಯವರಿಗೆ ಭೌತಿಕ ಸೃಷ್ಟಿ, ಜೈವಿಕ ಸೃಷ್ಟಿ, ಮತ್ತು ಕಾವ್ಯ ಸೃಷ್ಟಿ ಇವು ಮೂಲತಃ ಒಂದೇ ಬಗೆಯ ಪ್ರಕ್ರಿಯೆಗಳಾಗಿದ್ದವು ಒಂದೇ ಜೀವಶಕ್ತಿ ಮೂಲ ಸ್ರೋತ ಪ್ರಕೃತಿ ಪುಷರಾಗಿ ಎರಡಾಗುವುದು ವಿಶ್ವಸೇಷ್ಟಿಯ ಲೀಲೆಯಾಗಿದ್ದರೆ ತಾಯಿಯ ಗರ್ಭದಲ್ಲಿ 'ಗರ್ಭಿಕರಿಸಿದ ಪಿಂಡವೊಂದು ಬೆಳೆದು ಹೊಎಬರುವ ಲೀಲೆ ಜೈವಿಕ ಸೃಷ್ಟಿಯಲ್ಲಿದೆ. ಕವಿಯ ಮನಸ್ಸಿನಲ್ಲಿ "ವಾದ ಭಾವವೊಂದು ಕಾವ್ಯದ ರೂಪ ಪಡೆದುಕೊಂಡು ಹುಟ್ಟಿಬರುವ ಸೃಷ್ಟಿಯೂ ಅವರ ದೃಷ್ಟಿಯಲ್ಲಿ ಇಷ್ಟೇ ನಿಗೂಢವಾಗಿದೆ. ಈ ನಿಗೂಢವಾದ ಸೃಷ್ಟಿಕ್ರಿಯೆಯಲ್ಲಿ ಕವಿಯ ಜಾಗೃತ ಪ್ರಜ್ಞೆಯ ಅಂಶ ತೀರಾ ಗೌಣವಾಗಿದೆ.'

ನೀ ಹೊರಗೆ ಬಿದ್ದಿ

ಅಂತ ಪುಕಾರ ಆತು

–

ನೀ ಒಳಗ ಇದ್ದೀ ಅಂತ

ಪಿಸು ಆತ

ಹೀಗೆ ಹೋದ ಬುಧವರ ಬರಲೋಲ್ಲು ಮತ್ತೆ ಶ್ರಾವಣ ಬಂತು

ಸಂಪುಟ 03,ಪು,ಸಂ 145.

ಬೆಂಕಿ, ಕೆಂಡ ಬೂದಿ

ಬೂದೀ ಕೆದಕಿದರೆ ಆತ್ಮೀಯ ಸಿಗೋದೇನು?

ಬಳಿ–ಬಳಿ–ಬಳಿ

ಯಾರ ಬಳಿ

'ಯಾರ ಬಳಿ' ಎನ್ನುವ ಕವಿ ಮತ್ತು ಅವರ ಹೆಂಡತಿಯ ಆತ್ಮೀಯ ಸಂಬಂಧ ಈಗ ಅಷ್ಟೇ ಆತ್ಮೀಯವಾದ ಅವರ ಸಾವಿನ ಸಂಬಂಧವಾಗಿ ಬಿಟ್ಟಿದೆ. ಎನ್ನುವುದನ್ನು ಸೂಚಿಸುತ್ತದೆ.

ಕುವೆಂಪು ಸಾಹಿತ್ಯದ ತುಂಬಿದ್ದು ಈ ಅರಣ್ಯ ಸಂಸ್ಕೃತಿ, ನಾಗರಿಕತೆ ಅಥವಾ ಆಧುನಿಕತೆಗೆ ಮುಖಾಮುಖಿವಾಗುವಾಗಿನ ಪ್ರತಿಕ್ರಿಯೆ ಮತ್ತು ತಲ್ಲಣಗಳನ್ನು ಕುವೆಂಪು ಅವರ ಕೃತಿಗಳ ಗ್ರಹಿಸಿ ನಿರೂಪಿಸಿರುವ ಕ್ರಮ ವಿಶಿಷ್ಟವಾಗಿದೆ.

ಏಕಲವ್ಯನಿಗೂ ಹಸ್ತಿನಾಪುರದ ಪಾರ್ಥಿವ ರಾಜಕುಮಾರ ನಾಗರಿಕನಾದ ಅರ್ಜುನನಿಗೂ ನಡೆಯುವ ಮುಖಾಮುಖಿಯಯ್ಲಲಿ ವಚನರರಾದ ತ್ನನಂಥವರು ಅಸೂಯೆಯನ್ನು ಅರಿಯದವರು ಹೆಸರನ್ನು ಮರೆಯುಸುವ ಅಹಂಕಾರ ಅವರಿಗೆ ತಿಳಿಯದು ಹೆಸರಿನ ಆನೆ ಅದೊಂದು ನಾಗರಿಕರಿಗೆ ಮೀಸಲಾದ ಮನೋಜಾಡ್ಯವೇ ಸರಿ ನನಗೂ ಇದೆ. ನನಗಿರುವ ಹಾಗೆ ಒಂದು ಹೆಸರು ಆದರೆ ಅದು ಇರುವುದು ಅಹಂಕಾರವನ್ನು ಮರೆಯತಂದ ಅಲ್ಲ ಎನ್ನುವುದನ್ನು ನಿವೇದಿಸುವುದಕ್ಕೆ ಎನ್ನುತ್ತಾನೆ.

ನಯಕರಲ್ಲಿ ಶೂದ್ರ ವರ್ಗದವರು ಮೆಲುವರ್ಗದವರ ಪ್ರತಿಷ್ಠತೆಯ ಕಾರಣದಿಂದ ತಮಗೆ ಚರಿತ್ರೆಯೂದ್ದಕ್ಕೂ ನಿರಾಕೃತವಾದ ಸವಲತ್ತು ಹಾಗೂ ಹಕ್ಕುಗಳಿಗಾಗಿ ಪ್ರತಿಭಟಿಸುವ ಆತ್ಮಪ್ರತ್ಯಯ ಮೋಲತವಾದ ವ್ಯಕ್ತಿತ್ವ ಉಳ್ಳವರು ತಾನು ಶೂದ್ರನಾದ ಕಾರಣದಿಂದ ಶಿಕ್ಷಣದ ಸವಲತ್ತುಗಳನ್ನು ಕರಗತಮಡಿಕೊಂಡಿರುವ ಏಕಲವ್ಯ ತಾನು ಶೂದ್ರನದುದರಿಂದಲೇ ತಪಸ್ಸನ್ನು ಕೈಗೊಳ್ಳಲುನರ್ಹನೆಂಬ ಮೇಲುವರ್ಗದ ಜನರ ಶಾಸ ಬುದ್ದಿಯನ್ನು ನಿರ್ಲಕ್ಷಿಸಿ ಶಿವ ಗುಡಿಯ ಪೂಜಾರಿಗಳು ದೇವಸ್ಥಾನದ ಹತ್ತಿರಕ್ಕೆ ಸೇರಿಸದೆ ಹೋದಾಗ ಆ ದೇವಸ್ಥಾನವನ್ನೇ ದಿಟ್ಟತನದಿಂದ ತಿರಸ್ಕರಿಸಿ ತಾನು ಮಡುವ ದೈನಂದಿನ ಕರ್ಮಗಳಲ್ಲಿಯೇ ಶಿವನನ್ನು ಕಾಣುವ ಚಲಗಾರ ಇದರಲ್ಲಿ ಹೊಸ ಎಚ್ಚರದ ಮತ್ತು ಪ್ರತಿಭಟನೆಯ ವೈಚಾರಿಕ ಆಕೃತಿಗಳಿವೆ.

'ಕೋಗಿಲೆ ಮತ್ತು ಸೋವಿಯೇಟ್ ರಷ್ಯಾ ಎಂಬ ಕವಿತೆಯ ಮೂಲಕ ತೋರಿರುವ ಸೃಜನಾತ್ಮಕ ಪ್ರತಿಕ್ರಿಯ ವಿಶೇಷ ರೀತಿಯದಾಗಿದೆ. ವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕು ಮಾಡುವ ಸಮಾನತೆಯನ್ನು ಒಂದು ಮೌಲ್ಯವೆಂದು ಒಪ್ಪುವ ಸಾಮ್ಯವಾವನು ಕುವೆಂಪು; ಹಿಂದಾಯಿತು ಓರ್ವರ ಗರ್ವದ ಕಾಲ ಇಮದು ಸರ್ವರ ಕಾಲ' ಎಂದು ಘೋಷಿಸುತ್ತಾರೆ.

ಹೊಳೆಯುತಿದೆ ಹೊಳೆಯುತಿದೆ ಹೊಸಮತದ ಹಳೆಯಲ್ಲಿ

ಕೊಚ್ಚಿಹೊಗಲಿ ಬರಲಿ ವಿಜ್ಞಾನ ಬುದ್ದಿ'

ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು ಎಂಬ ನವಯುಗ ವಾಣಿ ಘೋಷಿಸಿದೆ ಕೇಳಿ

{ಹೊಸಬಾಳಿನ ಗೀತೆ ಪು ಸಂ 373}

ಹೀಗೆ ಭೋರಿಡುವ ಮತ್ತು ಅಗ್ನಿ ಪ್ರವಾಹ ದಿಕ್ಕು ದಿಕ್ಕಿಗೆ ಸಿಡಿಯೊಡೆದು ಅವರ ದೇಶ ದೇಹ ವಿವದ ಗ್ರಹ ಭೂಮಿ ಸೂರ್ಯ ಚಂದ್ರಾದಿಗಳಿಗಾಗಿ ರೂಪಗೊಂಡು ನನಗೆ ಈ ಭೂಗಭಘವೇ

ಸೆಲೆಮನೆಯಾಗಿ ಕಲ್ಲೇ ನನ್ನ ಮೈಯಾಗಿ ಶತಶತಮಾನಗಳಿಂದ ಸ್ಥಗಿತಗೊಂಡಿದ್ದೇನೆ. ಹೀಗಿರುವಾಗ ನನ್ನ ಜಡೆ ಹುಟ್ಟಿಕೊಂಡವರೆಲ್ಲ.

ಕಾಲಕ್ರಮಾಯಣ ಮರಗಿಡಗಳಾಗಿ ಮಾಡಿದವರು ಉಸಿರೆಳೆದು ಸೊಂಪಾಗಿ ಬೆಳೆದು ನಿಂತರು" ಮತ್ತೆ ಕೆಲವರು ಪ್ರಾಣಿ ರೂಪವನ್ನು ತಾಳಿ ಸಂಚರಿಸತೊಡಗಿದರು . ಮತ್ತೆ ಕೆಲವರೂ ಮನುಷ್ಯರಾಗಿ ಶತಶತಮಾನಗಳ ಕಾಲ ತಪ್ಪು ಹಾದಿಯನ್ನು ತುಳಿದು ಕೊನೆಗೆ ಬುದ್ದಿಶಕ್ತಿಯನ್ನು ಪಡೆದುಕೊಂಡು ನಾಗರಿಕರಾದರು ಇದು ಸೃಷ್ಟಿಯ ಇತಿಹಾಸ ವಿಜ್ಞಾನವು ನಿರೂಪಿಸಿದ ಅದ್ಭುತವನ್ನು ಕುವೆಂಪು ಕಾವ್ಯಮಯವಾಗಿ ವರ್ಣಿಸಲಾಗಿದೆ. ಎಲ್ಲ ಜಡತೆಯ ಬಯಕೆಯ ಚೈತನ್ಯ ಸಿದ್ದಿಯೂ ಎನ್ನುವ ಚೈತನ್ಯವೇ ಇಲ್ಲಿ ದರ್ಶನವಾಗಿ ಸಾಹಿತ್ಯದಲ್ಲಿ ಅಭಿವ್ಯಕ್ತಾಗಿರುವುದನ್ನು ಗುರುತಿಸಬಹುದು.

ಆಕಾರ ಗ್ರಂಥಗಳು

1. ಹಾಡೆ ಹಾಡಿಯ ತೋರಿತು: ಬೇಂದ್ರೆ, ಕುವೆಂಪು. ಪು.ತಿ.ನ ಲೇಖಕರು ಎಚ್. ಎಸ್, ರಾಘವೇಂದ್ರ

ಪ್ರಕಾಶಕರು: ಬೆಂಗಳೂರು ಪೋರು , ಬುಕ್ ಹೌಸ್ ಗ್ರಂಥಮಾಲೆ ವರ್ಷ:1995

2.ಸಾಹಿತ್ಯರತ್ನ ಸಂಪುಟ ಲೇಖಕರು :–ಎನ್.ಎಸ್, ಲಕ್ಷ್ಮೀನಾರಾಯಣ ಭಟ್ಟ ಪ್ರಕಾಶಕರು: ನೇತ್ರಾ ಪ್ರಿಂಟರ್ಸ್ ಬೆಂಗಳೂರು ವರ್ಷ:2004

3.ಪರಿಶೀಲನ ಲೇಖಕರು :– ಡಾ.ಎಸ್, ರತ್ನಮ್ಮ ಪ್ರಕಾಶಕರು: ಭಾಗ್ಯ ಎಂಟರ್ ಪ್ರೈಸಸ್ ಬೆಂಗಳೂರು ವರ್ಷ:2007

4.ಕಾವ್ಯ ಸಂಗಾತಿ ಲೇಖಕರು :– ಡಾ ಅಶೋಕ್ ನರೋಡೆ ಪ್ರಕಾಶಕರು: ಪಿ.ವಿವಿ ಪಬ್ಲಿಕೇಷನ್ಸ್ ಬೆಂಗಳೂರು ವರ್ಷ:2009

5.ದೇಸಿ ಮಾರ್ಗ ಲೇಖಕರು :– ಡಾ.ಕೆ. ಆರ್ ದುರ್ಗಾದಾಸ್ ಪ್ರಕಾಶಕರು: ಶ್ರೀ ಮಾಲತೇಶ್ ಪ್ರಕಶನ ಬೆಂಗಳೂರು ವರ್ಷ:2012

6.ಬೇಂದ್ರ ಶರೀಫರ ಕಾವ್ಯಯಾನ ಲೇಖಕರು :– ಎಸ್,ಎಲ್ ದೇಶಪಾಂಡೆ ಪ್ರಕಾಶಕರು: ದೇಸಿ ಪುಸ್ತಕ ಬೆಂಗಳೂರು ವರ್ಷ:2013

7.ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಲೇಖಕರು :– ಡಾ ಚಂದ್ರಶೇಖರ ರೊಟ್ಟಿಗವಾಡ ಪ್ರಕಾಶಕರು: ಸಾಹಿತ್ಯ ನಂದನ ಬೆಂಗಳೂರು ವರ್ಷ:2014

8.ಸಾಹಿತ್ಯ ಸಮಷ್ಠಿ ಲೇಖಕರು :– ಡಾ ಶಿವಾನಂದ ಕೆಳಗಿನಮನಿ ಪ್ರಕಾಶಕರು: ಅನ್ನಪೂರ್ಣ ಪ್ರಕಾಶನ ಬೆಂಗಳೂರು ವರ್ಷ:2014